ತೃಪ್ತರಾಗಿ, ಸಣ್ಣದೊಂದು ತೇಗನ್ನು ಕಳಿಸಿದ ಮೇಲೆ, 'ಅಪ್ಪಣೆಯಾಗಬೇಕು... ಶ್ರೀಮಂತರು ನಮ್ಮಂಥ ಬಡವರ ಮನೆಗೆ ಬಂದ ಕಾರಣವನ್ನು..' ಅಂದರು ಸೋಮಯ್ಯ ನಾಟಕೀಯವಾಗಿ. ಸಾಹುಕಾರರು ಸಾವಕಾಶವಾಗಿ ಕತೆ ಬಿಚ್ಚಿದರು.

'ನಿಮ್ಗೇ ಗೊತ್ತಲ್ಲ ಸ್ವಾಮೀ? ನನ್ನ ಹೆಂಡ್ತಿ ತುಂಬ ಚಿಕ್ಕ ವಯಸ್ಸಿನಲ್ಲೇ ತೀರಿ ಹೋದ್ಲು... ದೇವರು ನಂಗೆ ಸಾಕಷ್ಟು ಸಂಪತ್ತು ಕರುಣಿಸಿರೋದ್ರಿಂದ, ಮಕ್ಳನ್ನ ಬೆಳೆಸೋದು ಕಷ್ಟ ಆಗ್ಲಿಲ್ಲ. ಇದೀಗ ಮಗಳು ಬೆಳೆದು ನಿಂತಿದಾಳೆ. ಹತ್ತು ವರ್ಷ ಅವಳಿಗೆ! ಒಳ್ಳೇ ವರಾನೂ ಬಂದಿದೆ. ಮದ್ವೆ ಮಾಡಿ ಮುಗಿಸೋದು ನನ್ನ ಕರ್ತವ್ಯ ಅಲ್ವ? ಆದ್ರೆ ತಾಯಿ ಇಲ್ಲದ ಕಂದನಿಗೆ ಅವರಿವ್ರ ಕೈಲಿ ಧಾರೆ ಎರೆಸೋಕೆ ನಂಗೆ ಮನಸ್ಸಿಲ್ಲ. ಮಗಳನ್ನ ನಾನೇ ಕೈಯಾರೆ ಧಾರೆ ಎರಕೊಡ್ಬೇಕು ಅಂತ ನನ್ನ ಆಸೆ. ಹಾಗಂತ ಪಕ್ಕದಲ್ಲಿ ಹೆಂಡ್ತಿ ಬ್ಯಾಡವೇ? ಅದಿಕ್ಕೇ ಕನ್ಯಾರ್ಥಿ ಆಗಿ ಬಂದಿದೀನಿ. ದಯವಿಟ್ಟು ದೊಡ್ಮನಸು ಮಾಡ್ಬೇಕು..' ಕೈಮುಗಿದು ಎದ್ದು ನಿಂತೇ ಬಿಟ್ಟರು ಶ್ರೀಮಂತರು.

'ದಯವಿಟ್ಟು ನಿಮ್ಮ ದೊಡ್ಡ ಮಗಳು ರತ್ನಳನ್ನ ನಂಗೆ ಕೊಟ್ಟು ಲಗ್ನ ಮಾಡಿ ಕೊಡಿ. ನಾನೇನೂ ಕೃತಘ್ನನಾಗೋಲ್ಲ. ನಿಮ್ಮ ಉಳಿದ ಮಕ್ಳಿಗೂ ಸಹಾಯ ಮಾಡ್ತೀನಿ.' ಆ ರಾತ್ರಿ ಮಡದಿಯಲ್ಲಿ ಸೋಮಯ್ಯ ವಿಷಯ ಬಿಚ್ಚಿದಾಗ ಬಿರುಸಿನ ಚರ್ಚೆಯೇ ನಡೆದು ಹೋಯ್ತು.

'ಒಂದು ತುತ್ತು ಅನ್ನ ಕಡ್ಮೆತಿಂದ್ರೂ ಪರವಾಗಿಲ್ಲ... ನನ್ನ ಕಂದನ್ನ ಎರಡ್ನೇ ಸಂಬಂಧಕ್ಕೆ ಕೊಡಲ್ಲ...' ಕಡ್ಡಿ ಮುರಿದಂತೆ ಹೇಳಿ ಬಿಟ್ಟಳು ನಾಗಮ್ಮ.

ಬಗೆ ಬಗೆಯಾಗಿ ರಮಿಸಿದರು ರಸಿಕ ಸೋಮಯ್ಯ ಮಡದಿ ಮಣಿಯನ್ನು! ಆಕೆ ಏನೂ ಮಾತಾಡದ ಹಾಗೆ ತಮ್ಮ ದಪ್ಪ ತುಟಿಗಳಿಂದ ಮುಚ್ಚಿಬಿಟ್ಟರು!

ಮತ್ತೆ ನಿಧಾನವಾಗಿ ಹೇಳಿದರು–

'ನೋಡು ನಾಗೂ,,, ಮೂರು ಮಕ್ಳು ಇದ್ರೂ ನಮ್ಮ ಸುಬ್ಬಪ್ಪನೋರಿಗೆ ವಯಸ್ಸು ಮೂವತ್ತೈದು ಮೀರಿಲ್ಲ. ಐಶ್ವರ್ಯ ಅವರಲ್ಲಿ ಕಾಲು ಮುರಿದು ಬಿದ್ದಿದೆ. ನಮ್ಮ ರತ್ನಾ ಅಲ್ಲಿ ರಾಣಿ ಇದ್ದ ಹಾಗೆ ಇರ್ತಾಳೆ... ಯೋಚ್ನೆ ಮಾಡು... ಅಷ್ಟೆ ಅಲ್ಲ... ನಮ್ಮ ಉಳಿದ ಮಕ್ಳಿಗೂ ಅನುಕೂಲ ಮಾಡಿ ಕೊಡ್ತೀನಿ ಅಂದಿದಾರೆ' ಉಳಿದ ಮಕ್ಕಳ ಬದುಕೂ ಹಸನಾಗ್ತದಲ್ಲ ಅಂತ ಸರೀಂತ ಒಪ್ಪಿದಳು ನಾಗಮ್ಮ.

* * *

ಅಳಿಯನಾಗುವವನ ವೈಭೋಗವನ್ನಾದರೂ ಒಮ್ಮೆ ಕಣ್ತುಂಬ ನೋಡಿ ಬರೋಣ ಅಂತ ಒಂದು ದಿನ ಸೋಮಯ್ಯ ಪಕ್ಕದ ಬೋಧನಪುರಕ್ಕೆ ಪ್ರಯಾಣ ಬೆಳೆಸಿದರು.

ಅಲ್ಲಿ ಅವರಿಗೆ ಸಿಕ್ಕ ಉಪಚಾರ ರಾಜಯೋಗ್ಯ. ಆ ಸಿಹಿಸಿಹಿ ಎಳನೀರು, ಬೆಳ್ಳಿ ಲೋಟಗಳಲ್ಲಿ ಬಂದ ಬಾದಾಮಿ ಹಾಲು, ಮಾವಿನ ಹಣ್ಣಿನ ಸೀಕರಣೆ, ಶಾವಿಗೆ ಪಾಯಸದಲ್ಲಿನ ಇಡಿ ಇಡಿ ಗೋಡಂಬಿ, ಹೋಳಿಗೆ... ತಣಿದು ಹೋದರು ಸೋಮಯ್ಯ. ಆ ಮೇಲೆ ಅವರ ತೋಟ– ತುಡಿಕೆಗಳ ವಿಶಾಲ ಸಂಪತ್ತನ್ನು ನೋಡಿ, ತಮ್ಮ ಅಂತಸ್ತಿನ ಬಗ್ಗೆ ನಾಚಿಕೆಯೂ ಆಯ್ತು. ಏನೀಗ? ನಾಳೆ ಇದಕ್ಕೆಲ್ಲ ತಮ್ಮ ಮಗಳೇ ಒಡತಿಯಾಗ್ತಾಳಲ್ಲ!

'ಬನ್ನಿ... ನಮ್ಮ ತಂದೆಯವರನ್ನು ತೋರಿಸ್ತೀನಿ.' ಅಂತ ಸುಬ್ಬಪ್ಪ ಮೂಲೆಯಲ್ಲಿದ್ದ ಕೋಣೆಗೆ ಕರೆದೊಯ್ದರು. ಅಲ್ಲಿ ಹಾಸಿಗೆಯ ಮೇಲೆ ಇದೀಗ ಕಳಾಹೀನರಾಗಿದ್ದ ಆಜಾನು ಬಾಹು ಕಾಯವೊಂದು ಮಲಗಿತ್ತು. ಬಿಳಿ ಮೈ ಬಣ್ಣ, ಫಳ ಫಳನೆ ಹೊಳೆಯುವ ಕಣ್ಣುಗಳು... ಕಾಯಿಲೆಯ ದೆಸೆಯಿಂದ ಜರ್ಝರಿತವಾಗಿದ್ದರೂ, ಮುಖದಲ್ಲಿನ ಕ್ಷಾತ್ರ ಕಡಿಮೆಯಾಗಿರಲಿಲ್ಲ.

ಸುಬ್ಬಪ್ಪನವರು ತಂದೆಗೆ ಭಾವೀ ಮಾವನವರನ್ನು ಪರಿಚಯಿಸಿದರು. ಆ ವೃದ್ಧ ಕೈಯೆತ್ತಿ ಮುಗಿದರು.

'ಮರಣೋನ್ಮುಖನಾದ ವ್ಯಕ್ತಿಗೆ ಯಾವ ಸಿದ್ಧೌಷಧವೂ ಪರಿಣಾಮಕಾರಿಯಾಗುವುದಿಲ್ಲ...' ಅಂದರು.

ಸುಬ್ಬಪ್ಪ ವಿವರಿಸಿದರು–

'ಮಲಗೀ ಮಲಗೀ ಅವರಿಗೆ ಬೇಸರ ಬಂದು ಹೋಗಿದೆ. ಬದುಕಲು ಇಷ್ಟ ಇಲ್ಲ. ಆದ್ರೂ ನಾವು ಮದ್ದು ಕೊಡಿಸ್ತಾನೇ ಇರ್ತೀವಲ್ಲ? ಅದಿಕ್ಕೇ ಯಾವಾಗ಼್ೂ ಇದೊಂದೇ ಮಾತು. ಜತೆಗೆ ಆಗಾಗ ಎರಡೂ ಕೈಮುಗಿದು ಆಕಾಶದತ್ತ ನೋಡುತ್ತಾ 'ಸಾವೇ ನಿನಗೆ ಸುಸ್ವಾಗತ' ಅಂತ ಹಂಬಲಿಸ್ತಾರೆ. ಹಿಂದೆಲ್ಲ ಬಯಲಾಟಗಳಲ್ಲಿ ನಾರದರ ಪಾತ್ರ ಮಾಡಿ ಸೈ ಅನ್ನಿಸಿ ಕೊಂಡವರು. ಈಗ ಹೀಗೆ... ಕರುಳು ಚುರಕ್ಕೆನ್ನುತ್ತೆ..'

ಸೋಮಯ್ಯನಿಗೂ ವಿಷಾದ ಭಾವ ಮುಸುಕಿತು. ಆ ದೇವರು ಯಾವ ಯಾವಾಗ ನಮ್ಮನ್ನು ಎಂಥೆಂಥ ಪರಿಸ್ಥಿತಿಗೆ ದೂಡಿ ಬಿಡ್ತಾನೋ!

ಮನೆಗೆ ಹೊರಡುವ ಮುನ್ನ ಮತ್ತೊಮ್ಮೆ ಸೋಮಯ್ಯ ಆರಿ ಹೋಗಲಿರುವ ದೀಪದಂತಿದ್ದ ವೃದ್ಧರ ಬಳಿ ಹೋದರು. ಕೈಯೆತ್ತಿ ನಮಸ್ಕರಿಸಿದರು. 'ಹೋಗಿ ಬರ್ತೀನಿ... ನೀವು ಬೇಗನೇ ಹುಶಾರಾಗ್ತೀರಿ....' ಅಂದರು.

'ಮರಣೋನ್ಮುಖನಾದ ವ್ಯಕ್ತಿಗೆ ಯಾವುದೇ ಸಿದ್ಧೌಷಧವೂ ಪರಿಣಾಮಕಾರಿಯಾಗುವುದಿಲ್ಲ' ಅಂದರು ತಾತ.

* * *

ರತ್ನಳ ಮದುವೆಯೆಂಬುದು ಹೂವಿನ ಸರ ಎತ್ತಿದಷ್ಟು ಸುಖವಾಗಿ ನಡೆದು ಹೋಯ್ತು. ಸೋಮಯ್ಯನಿಗೆ ಒಂದೇ ಒಂದು ರೂಪಾಯಿಯೂ ಖರ್ಚಿಲ್ಲ. ಸುಬ್ಬಪ್ಪನೇ ಬೀಗರಿಗೆ ಭಾರಿ ಭಾರಿ ಉಡುಗೊರೆಗಳನ್ನು ಕೊಟ್ಟು ತಣಿಸಿ ಬಿಟ್ಟರು. ಅವರಿಗೇನೂ ಖರ್ಚೇ ಇಲ್ಲದಿದ್ದರೂ 'ಇರಲಿ ಖರ್ಚಿಗಿಟ್ಟುಕೊಳ್ಳಿ...' ಅಂತ ಸಂಚಿಕೆಯ ತುಂಬ ಝಣ ಝಣ ಹಣವನ್ನೂ ಕೊಟ್ಟರು. 'ಸ್ವಲ್ಪ ವಯಸ್ಸು ಹೆಚ್ಚಾದರೇನಂತೆ? ಅಳಿಯ ಚಿನ್ನದ ಮನುಷ್ಯ!' ಕೊಂಡಾಡಿದರು ಸೋಮಯ್ಯ.

ಮದುವೆ ಮಂಟಪ ಝಗಮಗ ಕಂಗೊಳಿಸುತ್ತಿತ್ತು. ಅದೇನು ಹೂವು... ಅದೇನು ಅಲಂಕಾರ... ಮೂಗರಳಿಸುವ ಭಕ್ಷ್ಯ– ಭೋಜನಗಳು... ಇಂದ್ರನ ಅಮರಾವತೀಯನ್ನೇ ಬೇರು ಸಮೇತ ಕಿತ್ತು ತಂದಿಟ್ಟ ಹಾಗಿತ್ತು. ಹಾಗಾಗಿ, ಅಲ್ಲಿ ಅಪ್ಸರೆಯರೂ ಇದ್ದೇ ಇದ್ದರು.

ಧಾರೆ ಮುಗಿಯಿತು. ತಾಳಿ ಕಟ್ಟಿದ್ದೂ ಆಯ್ತು. ಆದರೆ ಗಂಡು–ಹೆಣ್ಣು ನಾಚಿಕೆಯಿಂದ ಒಬ್ಬರನ್ನೊಬ್ಬರು ಈಕ್ಷಿಸುವ ಸಂದರ್ಭವೇ ಒದಗಲಿಲ್ಲ. ಒಂದಿಷ್ಟೂ ಮೈಯರಳದ, ಬೆಡಗು–ಬಿನ್ನಾಣಗಳಿರದ ರತ್ನಳಲ್ಲಿ ಸುಬ್ಬಪ್ಪಗೆ ಈಗಲೇ ಯಾವ ಶೃಂಗಾರ ಭಾವವೂ ಉದ್ದೀಪನವಾಗುವಂತಿಲ್ಲ. ಅವರ ಮಧುರ ಮಂದಹಾಸಗಳೇನಿದ್ದರೂ, ಆರತಿ ಬೆಳಗುವ ನೆಪದಲ್ಲಿ ಪದೇ ಪದೇ ಮೈಕೈ ಸೋಂಕಿಸಿ ಪುಳಕವೇಳಿಸುತ್ತಿದ್ದ ಅಪ್ಸರಾಗಣದತ್ತ! ಅವರಲ್ಲಿ ಅನೇಕರು ಸಾಹುಕಾರರಿಗೆ ಚಿರಪರಿಚಿತರೇ! ಅವರೇ ಕೊಟ್ಟ ಸೀರೆ–ಒಡವೆಗಳಲ್ಲಿ ಬಾಗಿಬಳುಕಿ ವಿಲಾಸ–ವಿಭ್ರಮಗಳನ್ನು ಹುಡಿ ಹಾರಿಸಿಬಿಡುತ್ತಿದ್ದರು!

ಮಗಳ ಮದುವೆಯ ವಿಜೃಂಭಣೆಗಳನ್ನು ಕಣ್ತುಂಬ ನೋಡುತ್ತಾ ಭಾವಪರವಶಳಾಗಿದ್ದಳು ನಾಗಮ್ಮ. ಕನಸಿನಲ್ಲೂ ಕಂಡರಿಯದ ವೈಭವ ಸಿರಿ! ಮಗಳನ್ನು ಧಾರೆಯೆರೆದು ಕೊಟ್ಟಾಗ ಮಾತ್ರ ಕಣ್ಣ ಕೋಡಿ ಹರಿದಿತ್ತು. 'ಹೆಣ್ಣುಮಕ್ಕಳನ್ನ ಹೆರೋದೇ ಹೀಗೆ ಕಂಡವರಿಗೆ ಕೊಟ್ಟುಬಿಡೋದಿಕ್ಕಾ?' ಮೂಕವಾಗಿ ರೋದಿಸಿತು ತಾಯ ಹೃದಯ.

ಇತ್ತ ರತ್ನಳಿಗಂತು ಗಂಡನೆಂಬ ಪದಾರ್ಥದ ಅರ್ಥವೂ ಗೊತ್ತಿರಲಿಲ್ಲ. ತನಗೆ ಉಡಿಸಿದ್ದ ತನ್ನಷ್ಟೇ ಭಾರದ ಚಿನ್ನದ ಬಣ್ಣದ ಧಡೂತಿ ಜರಿಸೀರೆ ಆಕೆಯನ್ನು ವಿಸ್ಮಯಗೊಳಿಸಿತ್ತು. ಆ ಭಾರೀ ಡಾಬು, ತೋಳಬಂದಿ, ಬುಲಾಕು, ಜಡೆಬಿಲ್ಲೆ, ಕುತ್ತಿಗೆ ನೋಯಿಸುತ್ತಿದ್ದ ಸೈಕಲು ಚೈನು, ಅವುಗಳ ಫಳ ಫಳ– ಇವೆಲ್ಲಕ್ಕೆ ಮರುಳಾಗಿಬಿಟ್ಟಿದ್ದಳು ಆ ಕೂಸು. ಪದೇ ಪದೇ ಕಣ್ಣರಳಿಸಿ ಅವುಗಳ ಚಂದವನ್ನು ನೋಡುತ್ತಾ, ಮೆಲ್ಲ ಮೆಲ್ಲಗೆ ನೇವರಿಸುತ್ತಾ 'ಇವೆಲ್ಲವೂ ನನ್ನದೇ...' ಎಂದಾಕೆ ಹಿಗ್ಗಿ ಹೂವಾದಳು.

* * *

ಹೀಗೆ ಸುಬ್ಬಪ್ಪನವರ ದ್ವಿತೀಯ ವಿವಾಹ ಮಹೋತ್ಸವ ಅತಿ ವಿಜೃಂಭಣೆಯಿಂದ ಮುಗಿದುಹೋಯ್ತು. ಸರ್ವರೂ ಸರ್ವ ವಿಷಯ ಗಳಲ್ಲಿಯೂ ತೃಪ್ತರೂ ಆದರು. ಸೋಮಯ್ಯ ಅಳಿಯನ ಬಳಿ ಹೋಗಿ, ಅದೇ ನಾಟಕೀಯ ಶೈಲಿಯಲ್ಲಿ.

'ಮನಸ್ಸಿಗೆ ತುಂಬ ಸಂತೋಷವಾಯ್ತು... ತಾವು ಅಪ್ಪಣೆ ಕೊಟ್ಟರೆ ಊರಿಗೆ ಹೊರಡ್ತೇವೆ. ದನಕರು ನಮ್ಮ ದಾರಿ ಕಾಯ್ತವೆ...' ಎಂದು ಬಿನ್ನವಿಸಿದರು.

'ದಯವಿಟ್ಟು ಎರಡು ದಿನ ಇಲ್ಲೇ ಇರಿ... ಮನೇವ್ರೂ ನಮ್ಮ ತೋಟ ತುಡಿಕೆ ಎಲ್ಲ ನೋಡಲಿ...' ಸುಬ್ಬಪ್ಪ ಹೊಸ ಮಾವನವರನ್ನು ಕೋರಿಕೊಂಡರು. ಸೋಮಯ್ಯ ಪ್ರಶ್ನಾರ್ಥಕವಾಗಿ ಮಡದಿಯೆಡೆಗೆ ನೋಟ ಹರಿಸಿದರು. ಒಪ್ಪಿಗೆಯ ಮುಗುಳ್ನಗೆ ಸೂಸಿತು ಆಕೆಯ ಮುಖದಲ್ಲಿ.

ಸುಬ್ಬಪ್ಪನವರ ಪಾಳೆಯದಲ್ಲಿ ಮತ್ತೂ ಎರಡು ದಿನ ಉಳಿದಿದ್ದೆಂಬುದು ರತ್ನಳಿಗಂತು ಬಲು ಹಿಗ್ಗಿನ ವಿಷಯ. ಅಬ್ಬ... ಎಷ್ಟೊಂದು ತೋಟಗಳು...